ದಿನಾಂಕ : 12.03.2024
ಅಸಲು ದಾವೆ: 37/2015 ರಿಂದ 40/2015
ಡಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಎಂ. ರವರಿಂದ :</u>**

OS 40/2015 ನ್ನು ಮಹಾಲಿಂಗ ಮತ್ತು ಇತರರು ದಾವೆ ಹೂಡಿರುತ್ತಾರೆ. ಅವರು ಏನು ಪರಿಹಾರ ಕೇಳಿರುತ್ತಾರೆ ಎಂದರೆ ಸರ್ವೆ ನಂ.6 - ಸರ್ವೆ ನಂ.7 ಆಗಿರುತ್ತದೆ ಎಂದು ದಾವೆ ಹೂಡಿರುತ್ತಾರೆ. ಈ ಕೇಸಿನ ವಾದಿಗಳಿಗೂ ಮತ್ತು ಮೂಲ ಕ್ರಯದಾರರಿಗೆ ಏನು ಸಂಬಂಧ ಎಂದರೆ ನನಗೆ ಗೊತ್ತಿಲ್ಲ. ದಾವೆಯನ್ನು 2 ಎಕರೆ 36 ಗುಂಟೆಗೆ ಹಾಕಿರುತ್ತಾರೆ. ಅವರಿಗೆ ಹೇಗೆ ಬಂದಿರುತ್ತದೆ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾದ ಪತ್ರದ ಬಗ್ಗೆ ಸ್ವಲ್ಪ ತಿಳಿದುಕೊಂಡಿರುತ್ತೇನೆ. ಎಷ್ಟನೇ ಸರ್ವೆ ನಂಬರ್ ಗೆ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ನಂ.7 ಕ್ಕೆ ದಾವೆ ಹೂಡಿದ್ದು ನಮ್ಮ ಜಮೀನಿಗೆ ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗಳ ತಾತ ಸಣ್ಣನಿಂಗೇಗೌಡ ದಿನಾಂಕ 04.11.1943 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು. ಖರೀದಿ ಮಾಡುವಾಗ ಅವರ ಕ್ರಯಪತ್ರದಲ್ಲಿ ಸರ್ವೆ ನಂ.7 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ತಪ್ಪು ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಏನು ತಪ್ಪು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ನಂ.6 ಎಂದು ಬರೆಯಬೇಕಿದ್ದು ಆದರೆ ಸರ್ವೆ ನಂ.7 ಎಂದು ಕ್ರಯಪತ್ರದಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಖರೀದಿ ಮಾಡುವ ಕಾಲಕ್ಕೆ ಸರ್ವೆ ನಂ.7 ಆಗಿತ್ತು ಎಂದರೆ ಸರಿಯಲ್ಲ. ಹಿಂದೆ ನಾನು ಖರೀದಿ ಮಾಡಿದ ಜಮೀನಿನ ಸರ್ವೆ ನಂ.7 ಇತ್ತು. ಅವರ ಕ್ರಯಪತ್ರದಲ್ಲಿ ಸರ್ವೆ ನಂ.7 ರ ಚೆಕ್ಕುಬಂದಿ ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಅದು ತಪ್ಪಾಗಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಜಮೀನನ್ನು ಖರೀದಿ ಮಾಡುವಾಗ ಈ ಕೇಸಿನ ವಾದಿಗಳ ತಾತ ಸಣ್ಣನಿಂಗೇಗೌಡ ಖರೀದಿ ಮಾಡಿದ ಜಮೀನನ್ನು ನಾನು ಹಕ್ಕಿಲ್ಲದೆ ಇರುವ ವ್ಯಕ್ತಿಯಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. E.C. ಯಲ್ಲಿ ಸದರಿ ಕ್ರಯಪತ್ರದ ವ್ಯವಹಾರವನ್ನು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಜಮೀನು ಖರೀದಿ ಮಾಡುವ ಮುಂಚೆ ಸರ್ವೆ ನಂ.7 ಯಾರ ಯಾರ ಹೆಸರಿಗೆ ವ್ಯವಹಾರ ಆಗಿರುತ್ತದೆ ಎಂದು ನೋಡಿರುತ್ತೇನಾ ಎಂದರೆ ಸಾಕ್ಷಿಯು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಕ್ರಯಪತ್ರದಲ್ಲಿ ಸರ್ವೆ ನಂ.7 ಕ್ಕೆ ಸಂಬಂಧಪಟ್ಟಂತೆ ಹಿಂದೆ ಆಗಿರುವ ವ್ಯವಹಾರದ ಬಗ್ಗೆ ನಮೂದು ಮಾಡಿರುತ್ತೇನಾ ಎಂದರೆ ನಮೂದು ಮಾಡಿರುವುದಿಲ್ಲ. ಹಿಂದೆ ಸರ್ವೆ ನಂ.7 ರ RTC ಯಲ್ಲಿ ಅನುಭವದಾರರ ಕಾಲಂ ನಲ್ಲಿ ಸಣ್ಣನಿಂಗೇಗೌಡ ಅವರ ಹೆಸರು ಬರುತ್ತಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ಚಿಕ್ಕನಂಜುಂಡ ಮತ್ತು ಮರಿಯಕ್ಕ ರವರಿಗೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. OS 41/2015 ರಲ್ಲಿ ಕಾಣಿಸಿರುವ ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿಲ್ಲ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ದಾವಾ ಆಸ್ತಿಯಲ್ಲಿ ಹಿಂದೆ ಚಿಕ್ಕನಂಜುಂಡ ಮತ್ತು ಮರಿಯಕ್ಕ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಕೂಡ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.7 ರ 20 ಎಕರೆ 24 ಗುಂಟೆ ಜಮೀನು ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರ ಸ್ವಾಧೀನಾನುಭವದಲ್ಲಿ ಇರಲಿಲ್ಲ ಮತ್ತು ಯಾವ ಕಾಲಕ್ಕೂ ನನ್ನ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸೇರಿದ ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** 12 **ನೇ ಪ್ರತಿವಾದಿಗಳ ಪರ ವಕೀಲರು** 25.09.2023 **ರಂದು ಪುಟಸಂಖ್ಯೆ** 9 **ರಲ್ಲಿ** 3 **ನೇ ಪ್ಯಾರ ಕೊನೆಯ ಸಾಲಿನಲ್ಲಿ** (**ಅದು ಸರ್ವೆ ನಂಬರ್** 6 **ಆಗಿರಲಿಲ್ಲ ಎಂದರೆ ಅದು ಯಾವ ಸರ್ವೆ ನಂಬರ್ ಎಂದರೆ ಸಾಕ್ಷಿಯು ಅದು ಸರ್ವೆ ನಂ.**7 **ಆಗಿರುತ್ತದೆ ಎಂದು ನುಡಿಯುತ್ತಾರೆ**) **ಮತ್ತು ಪುಟಸಂಖ್ಯೆ** 11 **ರ** (**ಚಿಕ್ಕನಂಜುಂಡ ಮತ್ತು ಮರಿಯಕ್ಕ ರವರಿಗೆ** 1958-59 **ರಲ್ಲಿ ಸಾಗುವಳಿ ಚೀಟಿ ಬಂದಿದೆ. ಸಾಗುವಳಿ ಚೀಟಿಯನ್ನು ಕೊಟ್ಟಿರುತಾರೆ ಎಂದರೆ ಸರ್ಕಾರದಿಂದ ಮಂಜೂರಾಗಿದ್ದು ತಹಶೀಲ್ದಾರ್ ಮಂಜೂರು ಮಾಡಿರುತ್ತಾರೆ**) **ಈ** 2 **ಪಾಟೀ ಸವಾಲಿನ ಅಂಶವನ್ನು ಮರುವಿಚಾರಣೆ**

**ಮಾಡಬೇಕೆಂದು ಪ್ರಾರ್ಥಿಸಿದ್ದು, ಆದರೆ ಸಾಕ್ಷಿಯೇ ಸ್ವತಃ ತಮ್ಮ ಉತ್ತರವನ್ನು ನೀಡಿದ ಕಾರಣ ಮನವಿಯನ್ನು ತಿರಸ್ಕರಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.